ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 26.06.2025
ಪಾಟೀಸವಾಲು ಪ್ರತಿವಾದಿಯರ ಪರ ಶ್ರೀ ಪಿ ಹೆಚ್ ಎ ವಕೀಲರಿಂದಃ

ನಾನು 10 ನೇ ತರಗತಿಯವರೆಗ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವೆ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಈ ದಾವೆಯನ್ನು ಪಾಲು ವಿಭಾಗ ಕೋರಿ ಸಲ್ಲಿಸಿರುತ್ತೇನೆ. ಸದರಿ ದಾವೆಯನ್ನು ಒಟ್ಟು 61 ಎಕರೆ ಜಮಿನಿನ ಕುರಿತು ಸಲ್ಲಿಸಿರುತ್ತೇನೆ. ಅವುಗಳ ಸರ್ವೆ ನಂ. 371/1 ರ ವಿಸ್ತೀರ್ಣ 10 ಎಕರೆ 5 ಗುಂಟೆ , ಸರ್ವೆ ನಂ. 341/4/2 ರ ವಿಸ್ತೀರ್ಣ 2 ಎಕರೆ 24 ಗುಂಟೆ , ಸರ್ವೆ ನಂ. 366/2/2 ರ ವಿಸ್ತೀರ್ಣ 02 ಎಕರೆ 25 ಗುಂಟೆ , ಸರ್ವೆ ನಂ. 281/1/1 ರ ವಿಸ್ತೀರ್ಣ 4 ಎಕರೆ 3 ಗುಂಟೆ , ಸರ್ವೆ ನಂ. 341/2 ರ ವಿಸ್ತೀರ್ಣ 14 ಎಕರೆ 24 ಗುಂಟೆ , ಸರ್ವೆ ನಂ. 441/1 ರ ವಿಸ್ತೀರ್ಣ 03 ಎಕರೆ 4 ಗುಂಟೆ , ಸರ್ವೆ ನಂ. 446/2 ರ ವಿಸ್ತೀರ್ಣ 1 ಎಕರೆ 5 ಗುಂಟೆ , ಸರ್ವೆ ನಂ. 468/1/1 ರ ವಿಸ್ತೀರ್ಣ 1 ಎಕರೆ 3 ಗುಂಟೆ , ಸರ್ವೆ ನಂ. 370/1 ರ ವಿಸ್ತೀರ್ಣ 14 ಎಕರೆ 22 ಗುಂಟೆ , ಸರ್ವೆ ನಂ. 301/1 ರ ವಿಸ್ತೀರ್ಣ 01 ಎಕರೆ, ಸರ್ವೆ ನಂ. 301/3 ರ ವಿಸ್ತೀರ್ಣ 1 ಎಕರೆ 28 ಗುಂಟೆ , ಸರ್ವೆ ನಂ. 370/2 ರ ವಿಸ್ತೀರ್ಣ 5 ಎಕರೆ 16 ಗುಂಟೆ ಇರುತ್ತವೆ.

ಸದರಿ ಜಮೀನುಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ. ಅವುಗಳನ್ನು ಹಿರಿಯರು 4 ಭಾಗಗಳಾಗಿ ಹಂಚಿರುತ್ತಾರೆ. ಸದರಿ ವಿಭಾಗದಂತೆ ಅವರವರ ಹೆಸರಿನಂತೆ ಪಹಣಿಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಬೇಕಾದವರು ಮಾಡಿಕೊಂಡಿರುತ್ತಾರೆ. ನನ್ನ ಹೆಸರಿನಲ್ಲಿ ಆಗಿರುವುದಿಲ್ಲ ಎಂದು ನುಡಿಯುತ್ತಾರೆ.

ಮೇಲ್ಕಂಡ ಜಮೀನುಗಳನ್ನು ಹೊರತುಪಡಿಸಿ ಕುಷ್ಟಗಿಯಲ್ಲಿ 6 ಮನೆಗಳು ಇರುತ್ತವೆ. ಗಜೇಂದ್ರಗಡದಲ್ಲಿ ಒಂದು ಮಳಿಗೆ ಮತ್ತು ಒಂದು ಗೋಡಾವನ ಇರುತ್ತದೆ. ಸದರಿ ಆಸ್ತಿಗಳ ಕುರಿತು ಪಾಲು ಕೇಳಿರುತ್ತೇನೆ ಎಂದರೆ ಸರಿ. ನನ್ನ ಅಜ್ಜನ ಹೆಸರು ಮದ್ದಾನಪ್ಪ ಹುಲಬನ್ನಿ ಉರ್ಫ ಪಟ್ಟಣಶೆಟ್ಟಿ. ಅವರಿಗೆ 4 ಜನ ಮಕ್ಕಳು ಇರುತ್ತಾರೆ. ಅವರೆಂದರೆ ಕರಿಬಸಪ್ಪ ಮದ್ದಾನಪ್ಪ ಹುಲಬನ್ನಿ ಉರ್ಫ ಪಟ್ಟಣಶೆಟ್ಟಿ , ಸಿದ್ದಲಿಂಗಪ್ಪ ಮದ್ದಾನಪ್ಪ ಹುಲಬನ್ನಿ ಉರ್ಫ ಪಟ್ಟಣಶೆಟ್ಟಿ, ಗುರುಸಿದ್ದಪ್ಪ ಮದ್ದಾನಪ್ಪ ಹುಲಬನ್ನಿ ಉರ್ಫ ಪಟ್ಟಣಶೆಟ್ಟಿ, ಶರಣಪ್ಪ ಮದ್ದಾನಪ್ಪ ಹುಲಬನ್ನಿ ಉರ್ಫ ಪಟ್ಟಣಶೆಟ್ಟಿ ಇರುತ್ತಾರೆ. ಶರಣಪ್ಪ , ಸಿದ್ದಲಿಂಗಪ್ಪನ ಮತ್ತು ಅವರ ಮಕ್ಕಳನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ.

ಸರ್ವೆ ನಂ. 370 ಹಿಸ್ಸಾ ಬಿ ರ ವಿಸ್ತೀರ್ಣ 5 ಎಕರೆ 16 ಗುಂಟೆ ಇರುತ್ತದೆ. ಸದರಿ ಜಮೀನು ದೋಟಿಹಾಳ ಸೀಮಾದಲ್ಲಿ ಬರುತ್ತದೆ. ಸದರಿ ಜಮೀನಿನ ಚಕ್ಕಬಂದಿ ಪೂರ್ವಕ್ಕೆ ಬಸವರಾಜ ಸಿದ್ದಪ್ಪ ಪಟ್ಟಣಶೆಟ್ಟಿ ರವರ ಜಮೀನು , ಪಶ್ಚಿಮಕ್ಕೆ ಬಸವರಾಜಪ್ಪ ಬೈಲಪ್ಪ ಕುದರಿಮೋತಿ ರವರ ಜಮೀನು , ಉತ್ತರಕ್ಕೆ ಸಂಗಯ್ಯ ಬಸಯ್ಯರವರ ವಸ್ತ್ರದ ರವರ ಜಮೀನು , ದಕ್ಷಿಣಕ್ಕೆ ಮುರ್ತುಜಾಸಾಬ ಮತ್ತು ಮುದಿಯಪ್ಪ ರವರ ಜಮೀನು. ಮೇಲ್ಕಂಡ ಚಕ್ಕಬಂದಿ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಮಣ್ಣು (ಕಪ್ಪು) ಎರಿ ಭೂಮಿ ಇರುತ್ತದೆ. ಮೇಲ್ಕಂಡ ಆಸ್ತಿಯು ಮೊದಲು ಪ್ರತಿವಾದಿಗಳ ತಂದೆ ಕರಿಬಸಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮಕುಟುಂಬದ ಎಲ್ಲಾ ಆಸ್ತಿಗಳು ಅವರ ಹೆಸರಿನಲ್ಲಿದ್ದವು ಎಂದು ನುಡಿಯುತ್ತಾರೆ. ಸದರಿ ಜಮೀನು ವಿಭಾಗದಲ್ಲಿ ಕರಿಬಸಪ್ಪನ ಭಾಗಕ್ಕೆ ಬಂದಿತ್ತು ಎಂದರೆ ಸಾಕ್ಷಿ ಹಿರಿಯರು ತಗೆದ ಭಾಗದಲ್ಲಿ ಬಂದಿತ್ತು ಎಂದು ನುಡಿಯುತ್ತಾರೆ. ಅಂದಿನಿಂದಲೂ ಕರಿಬಸಪ್ಪನೆ ಸದರಿ ಜಮೀನಿನಲ್ಲಿ

ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸಾಕ್ಷಿಯು ಮೊದಲು ಅವರು ಮಾಡುತ್ತಿದ್ದು ಇತ್ತೀಚಿಗೆ ನಾವು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು ಶರಣಪ್ಪ ಎಲ್ಲಾ ಆಸ್ತಿಗಳನ್ನು ಸಾಗುವಳಿ ಮಾಡುತ್ತಿದ್ದು ಮನೆಯ ಹಿರಿತನವನ್ನು ಕರಿಬಸಪ್ಪ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಕರಿಬಸಪ್ಪನ ಮರಣಾನಂತರ ದಾವಾ ಸ್ವತ್ತಿನ ಸಾವಧೀನವನ್ನು ಅವರು ಮಕ್ಕಳು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಯಾವತ್ತೂ ಸ್ವಾಧೀನ ಇರಲಿಲ್ಲ ಮತ್ತು ಇಂದಿನವರೆಗೂ ಪ್ರತಿವಾದಿಗಳೆ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಓ ಎಸ ನಂ. 40/91 ರ ಪ್ರಕರಣವನ್ನು ಕರಿಬಸಪ್ಪರವರು ಎಷ್ಟು ಆಸ್ತಿಗಳು ಕುರಿತು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಒಟ್ಟು 75 ಎಕರೆ ಜಮೀನಿನ ಕುರಿತು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆಯನ್ನು ಮನೆಗಳು ,ಮಳಿಗೆ ಕುರಿತು ಸಲ್ಲಿಸಿದ್ದರು. ಸದರಿ ದಾವೆ ಚಾಲ್ತಿಯಲ್ಲಿದ್ದ ಸಮಯದಲ್ಲಿ ಪ್ರತಿವಾದಿಗಳ ತಂದೆ ಸರ್ವೆ ನಂ. 371 ರ 14 ಎಕರೆ 22 ಗುಂಟೆ , ಸರ್ವೆ ನಂ. 301/1 ರ 1 ಎಕರೆ , ಸರ್ವೆ ನಂ. 301/3 ರ 1 ಎಕರೆ 28 ಗುಂಟೆ ಜಮೀನು ಮತ್ತು ಮನೆ ನಂ. 855 ಹಳೆ ಮನೆ , ಮಳಿಗೆ ನಂ. 892 ಮಳಿಗೆಯನ್ನು ಮಾರಾಟ ಮಾಡಿರುತ್ತಾರೆ. ಮೇಲ್ಕಂಡ ಆಸ್ತಿಗಳನ್ನು ವಿಭಾಗದ ಪ್ರಕಾರ ಅವರವರ ಪಾಲಿಗೆ ಬಂದ ಆಸ್ತಿಗಳನ್ನು ಅವರವರೆ ಮಾರಾಟ ಮಾಡಿದ್ದು ಕರಿಬಸಪ್ಪ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓ ಎಸ ನಂ. 40/91 ರ ಪ್ರಕರಣದ ಬಗ್ಗೆ ನನಗೆ ಪೂರ್ಣ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಓ

ಎಸ ನಂ. 40/91 ರ ಪ್ರಕರಣದ ಬಗ್ಗೆ ನನಗೆ ಯಾವುದೆ ಮಾಹಿತಿ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಮಾಹಿತಿ ಇರುವುದಿಲ್ಲ. ಸದರಿ ಪ್ರಮಾಣ ಪತ್ರಕೆ ವಕೀಲರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹೇಳಿ ಮಾಹಿತಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ.

ಮದ್ದಾನೆಪ್ಪನ 4 ಮಕ್ಕಳ ನಡುವೆ ಆದ ವಿಭಾಗ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುವುದಿಲ್ಲ. ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಿರಿಯರು ಮಾಡಿದ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ. ಸಾಕ್ಷಿ ಪುನಃ ಮುಂದುವರೆದು ಹಾಜರುಪಡಿಸಿರುವುದಿಲ್ಲಎಂದು ನುಡಿಯುತ್ತಾರೆ. ದಾವಾ ಸ್ವತ್ತು ಸರ್ವೆ ನಂ. 370 ಹಿಸ್ಸಾ ಬಿ ವಿಸ್ತೀರ್ಣ 5 ಎಕರೆ 16 ಗುಂಟೆ ಜಮೀನಿನ ಖಾತೆಯನ್ನು ಪ್ರತಿವಾದಿಗಳು ತಮ್ಮ ಹೆಸರಿಗೆ ಯಾವ ವರ್ಷದಲ್ಲಿ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು 2016 ರಲ್ಲಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 2016 ರಲ್ಲಿ ನಾವು ಪಹಣಿ ತಗೆಸಿದಾಗ ನಮಗೆ ಸದರಿ ವಿಚಾರ ಗೊತ್ತಾಗಿರುತ್ತದೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ**